Rulings by the Speaker

(1) *re*: Opposition to the Introduction of a Bill

(2) *re*: making allegations

ಅಧ್ಯಕ್ಷರು.—ನಾನು 2 ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೆ ; ಅದರಂತೆ ಇವೊತ್ತು ಕೊಡುವುದಕ್ಕೆ ನಿಶ್ಚಯ ಮಾಡಿದ್ದೇನೆ. ಮೊದಲನೆಯದು, ಮಾನ್ಯತಾನೆ ಒಂದು ವಿಚಾರ ಚರ್ಚೆ ಯಾಯಿತ್ತು, ಅದರ ಬಗ್ಗೆ ರೂಲಿಂಗ್ ಕೊಡುತ್ತೇನೆ:—

1976 ನೇ ಇಸವಿಯ ಕರ್ನಾಟಕ ವಿಧಾನ ಮಂಡಲದ ಕಾರ್ಯಕಲಾಪಗಳ (ಪ್ರಕಟಣೆಗೆ ರಕ್ಷಣೆ ನೀಡುವುದನ್ನು) ರದ್ದುಪಡಿಸುವುದಕ್ಕೆ ಸಂಬಂಧಿಸಿದ ವಿಧೇಯಕವನ್ನು ಕೈಗಾರಿಕಾ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಫೆಬ್ರುವರಿ 3 ರಂದು ಮಂಡಿಸುವ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀ ಎಂ. ಎಸ್. ಕೃಷ್ಣನ್ ಅವರು ವಿಧೇಯಕದ ಮಂಡನೆಯ ಬಗ್ಗೆ ವಿರೋಧ ವ್ಯಕ್ತಪಡಿಸಿದರು. ಆ ಸಮಯದಲ್ಲಿ ಪರವಾಗಿ ಹಾಗೂ ವಿರೋಧವಾಗಿ ವಾದವಿವಾದಗಳು ನಡೆದುವು. ಈ ರೀತಿಯ ವಿರೋಧ ಎರಡನೆಯ ಬಾರಿಗೆ ವ್ಯಕ್ತವಾಗುತ್ತಿರುವುದರಿಂದ ಇದರ ಬಗ್ಗೆ ಸರಿಯಾದ ವಿವರಣೆ ನೀಡಬೇಕೆಂಬುದು ನನ್ನ ಆಶಯ.

ಸದಸ್ಯರಾಗಲೀ, ಸಚಿವರಾಗಲೀ ವಿಧೇಯಕವನ್ನು ಮಂಡಿಸಲಿಚ್ಛಿಸಿದಲ್ಲಿ, ವಿಧೇಯಕವನ್ನು ಮಂಡಿಸಲು ಅನುಮತಿ ಪಡೆಯುವ ಬಗ್ಗೆ ಪ್ರಸ್ತಾವೊಂದನ್ನು ನೀಡಬೇಕಾಗಿದ್ದು ಇದನ್ನು ದಿನದ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿಸಲಾಗುವುದು. ಪ್ರಸ್ತಾವನ್ನು ಸೂಚಿಸಬೇಕೆಂದು ಅಧ್ಯಕ್ಷರು ಸದಸ್ಯರಿಗಾಗಲೀ, ಸಚಿವರಿಗಾಗಲೀ ತಿಳಿಸಿದಾಗ ಅವರು ಪ್ರಸ್ತಾವನ್ನು ಸೂಚಿಸುವರು. ಆಗ ಯಾವ ಸದಸ್ಯರಾಗಲೀ ಸದರಿ ಪ್ರಸ್ತಾವನ್ನು ವಿರೋಧಿಸಬಹುದು. ವಿಧೇಯಕವನ್ನು ಮಂಡಿಸುವ ಪ್ರಸ್ತಾವನ್ನು ಈ ರೀತಿ ವಿರೋಧಿಸಿದಾಗ, ವಿರೋಧಿಸಿದ ಸದಸ್ಯರಿಗೆ ಹಾಗೂ ಪ್ರಸ್ತಾವನ್ನು ಸೂಚಿಸಿದ ಸದಸ್ಯರಿಗೆ ಅಥವಾ ಸಚಿವರಿಗೆ ಸಂಕ್ಷಿಪ್ತ ಹೇಳಿಕೆ ನೀಡುವಂತೆ ಅಧ್ಯಕ್ಷರು ಅನುಮತಿ ನೀಡಬಹುದು. ವಿಧೇಯಕವು ಶಾಸನಾ ಸಾಮರ್ಥ್ಯವನ್ನು ಮೀರಿದೆಯೆಂಬ ಕಾರಣದಿಂದ ಅದನ್ನು ವಿರೋಧಿಸಿದಲ್ಲಿ, ಸಂಪೂರ್ಣ ಚರ್ಚೆ ನಡೆಸಲು ಅಧ್ಯಕ್ಷರು ಅನುಮತಿ ನೀಡಬಹುದು. ಚರ್ಚೆಯನಂತರ ಅದನ್ನು ಮತಕ್ಕೆ ಹಾಕಲಾಗುವುದು. ಪ್ರಸ್ತಾವವು ಅಂಗೀಕೃತವಾದಲ್ಲಿ ಸದಸ್ಯರಾಗಲೀ ಸಚಿವರಾಗಲೀ ವಿಧೇಯಕವನ್ನು ಮಂಡಿಸುವರು. ವಿಧೇಯಕವನ್ನು ಮಂಡಿಸಿದ ನಂತರ ಅದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗುವುದು.

ಆದಾಗ್ಯೂ, ಈ ಕಾರ್ಯ ವಿಧಾನಕ್ಕೆ ವಿನಾಯಿತಿ ಇದೆ. ಸದಸ್ಯರಾಗಲೀ, ಸಚಿವರಾಗಲೀ ಸದನದಲ್ಲಿ ವಿಧೇಯಕವನ್ನು ಮಂಡಿಸುವ ಮುನ್ನ ಅದನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಲು ಅನುಮತಿ ಸುವಂತೆ ಅಧ್ಯಕ್ಷರು ಕೋರಬಹುದು. ಈ ರೀತಿ ಅಧ್ಯಕ್ಷರ ಆಜ್ಞೆಯ ಮೇರೆಗೆ ವಿಧೇಯಕವನ್ನು ಪ್ರಕಟಿಸಿದಲ್ಲಿ ಅದನ್ನು ಮಂಡಿಸಲು ನೀಡುವ ಪ್ರಸ್ತಾವನ್ನು ಸೂಚಿಸದೆ ನೇರವಾಗಿ ವಿಧೇಯಕವನ್ನು ಮಂಡಿಸಬಹುದು. ಈ ಸಂದರ್ಭದಲ್ಲಿ ವಿಧೇಯಕವನ್ನು ಮಂಡಿಸುವ ಬಗ್ಗೆ ಸೂಚನೆ ಇಲ್ಲದಿರುವುದರಿಂದ, ವಿಧೇಯಕದ ಮಂಡನೆಯನ್ನು ವಿರೋಧಿಸುವ ಪ್ರಶ್ನೆ ಉದ್ಭವಿಸುವುದಿಲ್ಲ. ವಿಧೇಯಕವನ್ನು ಮಂಡಿಸುವ ಮುನ್ನ ರಾಜ್ಯ ಪತ್ರದಲ್ಲಿ ಅದನ್ನು ಪ್ರಕಟಿಸಿದಲ್ಲಿ ವಿಧೇಯಕವನ್ನು ವಿರೋಧಿಸುವ ಅವಕಾಶವನ್ನು ಕ್ಯಬಿಡರಾಗುವುದೆಂಬುದು ವಾಸ್ತವ. ಆದರೆ, ಇದಕ್ಕೆ ನಿಯಮಾವಳಿಯಲ್ಲಿ ಅವಕಾಶವಿದೆ. ಆದ್ದರಿಂದ, ನನ್ನ ಆಜ್ಞೆಯ ಮೇರೆಗೆ ಈ ವಿಧೇಯಕವು ಈಗಾಗಲೇ ರಾಜ್ಯ ಪತ್ರದಲ್ಲಿ ಪ್ರಕಟವಾಗಿರುವುದರಿಂದ ಅದರ ಮಂಡನೆಯನ್ನು ವಿರೋಧಿಸಲು ಸದಸ್ಯರಿಗೆ ಅವಕಾಶವಿಲ್ಲವೆಂಬುದು ನನ್ನ ಅಭಿಪ್ರಾಯ.

ಇನ್ನೊಂದು ವಿಷಯದ ಬಗ್ಗೆ ಈ ಹಿಂದೆ ರೂಲಿಂಗ್ ಕೊಡುತ್ತೇನೆಂದು ಹೇಳಿದ್ದೆ ; ಅದು ಈ ರೀತಿಯಿದೆ :—

1975 ನೇ ಇಸವಿ ಏಪ್ರಿಲ್ 19 ರಂದು ಉತ್ತರ ಪ್ರದೇಶದಲ್ಲಿ ಬಹಿರಂಗ ಮಾರುಕಟ್ಟೆಯ ಗೋಧಿಯನ್ನು ಕೊಂಡಿದ್ದರಿಂದಾಗಿ ನಷ್ಟ ಸಂಭವಿಸಿದ ಬಗ್ಗೆ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಸಂದರ್ಭದಲ್ಲಿ ಆಹಾರ ಶಾಖೆಯ ಮಂತ್ರಿಗಳು ಹೇಳಿಕೆ ನೀಡಿದಾಗ ಅವರ ವಿರುದ್ಧ

ಕೆಲವು ಆರೋಪಗಳನ್ನು ಮಾಡಲಾಯಿತು. ಆ ಸಂದರ್ಭದಲ್ಲಿ 289 ನೇ ನಿಯಮದ ಮೇರೆಗೆ ಸದಸ್ಯರು ಪೂರ್ವ ಭಾವಿ ಸೂಚನೆಯನ್ನು ನೀಡಬೇಕಾಗಿದ್ದಿತೆಂದು ಅಭಿಪ್ರಾಯಪಡಲಾಯಿತ್ತು. ಇಡೀ ವಿಷಯವನ್ನು ಪರಿಶೀಲಿಸಿ ತೀರ್ಪನ್ನು ನೀಡುವುದಾಗಿ ನಾನು ಆಶ್ವಾಸನೆ ನೀಡಿದ್ದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸಂಸತ್ತಿನಲ್ಲಿ ಹಾಗೂ ವಿವಿಧ ವಿಧಾನ ಮಂಡಲಗಳಲ್ಲಿ ನೀಡಿದ ತೀರ್ಪುಗಳನ್ನು ಪರಿಶೀಲಿಸಿ ಕೆಳಕಂಡ ತೀರ್ಪನ್ನು ನೀಡುತ್ತಿದ್ದೇನೆ :

ಸದಸ್ಯರಿಗೆ ವಾಕ್ ಸ್ವಾತಂತ್ರ್ಯದಂತಹ ಕೆಲವು ವಿಶೇಷ ಅಧಿಕಾರಿಗಳು ಇರುತ್ತವೆ. ಸದನದಲ್ಲಿ ಅವರು ಮಾಡಿದ ಭಾಷ್ಣ ಎಷ್ಟೇ ಆಕ್ಷೇಪಹರ್ಹವಾಗಿದ್ದರೂ ಆ ಬಗ್ಗೆ ಸದನದ ಹೊರಗೆ ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದಿಲ್ಲ. ಆದಾಗ್ಯೂ ಸದನದಲ್ಲಿ ಅವರು ಮನಸ್ಸೀ ಮಾತನಾಡುವಂತಿಲ್ಲ. ಅವರ ವಾಕ್ ಸ್ವಾತಂತ್ರ್ಯ ಸಭಾ ಕಾರ್ಯಕಲಾಪವನ್ನು ನಿಯಂತ್ರಿಸುವ, ಸಂವಿಧಾನ, ನಿಯಮಾವಳಿ ಹಾಗೂ ಸ್ಥಾಯಿ ಆದೇಶಗಳನ್ನು ಅವಲಂಬಿಸಿರುತ್ತದೆ. ಸಂವಿಧಾನದ 211 ನೇ ಅನುಚ್ಛೇದ ಹಾಗೂ ನಭೆಯ 288 ಮತ್ತು 289 ನೇ ನಿಯಮಗಳು ಸದಸ್ಯರ ಭಾಷಣದ ಬಗ್ಗೆ ನಿರ್ಬಂಧವನ್ನು ವಿಧಿಸುತ್ತವೆ. ಸದಸ್ಯರೊಬ್ಬರು ಮತೊಬ್ಬ ಸದಸ್ಯರ ವಿರುದ್ಧ ಆರೋಪ ಮಾಡಬಾರದೆಂದು 288 ನೇ ನಿಯಮದಲ್ಲಿ ಹೇಳಿದೆ. ಸದಸ್ಯರು ಯಾವ ವ್ಯಕ್ತಿಯ ಬಗ್ಗೆಯಾಗಲೀ ಅವಮಾನಕರವಾದ ಅಥವಾ ದೋಷಾರೋಪಕರವಾದ ಆರೋಪಗಳನ್ನು ಮಾಡಬಾರದೆಂದು 289 ನೇನಿಯಮದಲ್ಲಿ ಹೇಳಿದೆ. ಹಾಗೆ ಮಾಡಲೇ ಬೇಕಾದ ಸಂದರ್ಭದಲ್ಲಿ ಆ ಬಗ್ಗೆ ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡಬೇಕೆಂದೂ ಅದರಲ್ಲಿ ತಿಳಿಸಿದೆ. ಈ ರೀತಿ ಮಾಡುವುದರಿಂದ ಸಂಬಂಧಪಟ್ಟ ಮಂತ್ರಿಗಳು ಆ ಬಗ್ಗೆ ತನಿಖೆ ನಡೆಸಿ ನಭೆಗೆ ವಿಷಯವನ್ನು ತಿಳಿಸಲು ಅನುಕೂಲವಾಗುತ್ತದೆ. ಹಾಗೆ ಪೂರ್ವಭಾವಿಯಾಗಿ ಸೂಚನೆ ನೀಡಿದ್ದಾಗ್ಯೂ, ಸದಸ್ಯರ ಆರೋಪಗಳು ನಭಾಷನತೆಗೆ ಕುಂದುಂಟಾಗುವುದಾಗಿ ಅಥವಾ ಸಾರ್ವಜನಿಕ ಹಿತಕ್ಕೆ ಧಕ್ಕೆಯುಂಟಾಗುವುದಾಗಿ ಅಧ್ಯಕ್ಷರಿಗೆ ಕಂಡು ಬಂದಲ್ಲಿ ಅವರು ಆರೋಪ ಮಾಡುವುದನ್ನು ತಡೆಯಲೂ ನಿಯಮಾವಳಿಯಲ್ಲಿ ಅವಕಾಶವಿದೆ. ಈ ನಿಯಮವು ಲೋಕ ನಭೆಯ 353 ನೇ ನಿಯಮದಂತಿದ್ದು ಲೋಕ ನಭೆಯ ನಿಯಮಾವಳಿ ಸಮಿತಿಯ ಇದರ ವ್ಯಾಪ್ತಿಯನ್ನು ಕೆಳಕಂಡಂತೆ ವಿವರಿಸಿದೆ :

''ಸದಸ್ಯರು ಸದನದಲ್ಲಿ ಮಾಡಿದ ಭಾಷಣದ ಬಗ್ಗೆ ಅವರ ಮೇಲೆ ಕ್ರಮ ಕೈಕೊಳ್ಳದಂತೆ ಅವರಿಗೆ ವಿಶೇಷಾಧಿಕಾರವಿದ್ದಾಗ್ಯೂ, ಸದನದಲ್ಲಿ ಹಾಜರಿರದ ವ್ಯಕ್ತಿಯ ಘನತೆ ಗಾಂಭೀರವಗಳಿಗೆ ಕಳಂಕ ತರುವಂತಹ ಚರ್ಚೆ ನಡೆದಾಗ ಅದನ್ನು ಸಮರ್ಥಿಸಿಕೊಳ್ಳಲು ಆ ವ್ಯಕ್ತಿಗಳಿಗೆ ಸಾಧ್ಯವಾಗದುದರಿಂದ ಸಭೆಯನ್ನು ವಿಚಾರವೇದಿಕೆಯನ್ನಾಗಿ ಮಾಡಿಕೊಳ್ಳಬಾರದು. ಜನತೆಯ ಗೌರವವನ್ನು ರಕ್ಷಿಸಲು ಅನುಕೂಲಿಸುವಂತೆ, ಸಾರ್ವಜನಿಕ ಹಿತಾಸಕ್ತಿ ಇರುವಂತಹ ಸಂದರ್ಭಗಳಲ್ಲಿ ಹಾಗೂ ಆ ರೀತಿ ಮಾಡಬೇಕಾದ ಅವಶ್ಯಕತೆ ಕಂಡುಬಂದಲ್ಲಿ ಮಾತ್ರ ಆ ರೀತಿ ಆರೋಪಗಳನ್ನು ಮಾಡಬಹುದೇ ವಿನಾ, ಇತರ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಆ ರೀತಿ ಮಾಡದೆ ಸ್ವೇಚ್ಛಾಪೂರ್ವಕವಾಗಿ ಸಂಯಮದಿಂದ ವರ್ತಿಸಬೇಕು. ಅಂತಹ ಸಂದರ್ಭದಲ್ಲಿಯೂ ವಿಷಯದ ಬಗ್ಗೆ ತನಿಖೆ ನಡೆಸಿ ಮಾಹಿತಿಯನ್ನೊದಗಿಸಲು, ಸಾಧ್ಯವಾದಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ರಕ್ಷಣೆಯನ್ನೊದಗಿಸಲು ಅನುಕೂಲಿಸುವಂತೆ ಸಂಬಂಧಪಟ್ಟ ಮಂತ್ರಿಗಳಿಗೆ ಸೂಕ್ತ ಅವಕಾಶವನ್ನು ನೀಡಬೇಕು. ಯಾವುದೇ ವಿಷಯದ ಬಗ್ಗೆ ಸೂಕ್ತ ತನಿಖೆ ನಡೆಸಿದ ನಂತರ ಆದರಿಂದಾಗಿ ಯಾವುದೇ ವ್ಯಕ್ತಿಯ ಘನತೆ ಗೌರವಗಳಿಗೆ ಕಳಂಕ ತರುವಂತಹದಾಗಿದ್ದು ಅದನ್ನು ನಭೆಯ ಗಮನಕ್ಕೆ ತರಲು ಸದಸ್ಯರಿಗೆ ಪೂರ್ಣಾಧಿಕಾರ ವಿದ್ದಾಗ್ಯೂ ಸದಾಚಾರವನ್ನು ರೂಢಿಸುವ ಹಾಗೂ ಸಾಂವಿಧಿಕ ಘನತೆಯನ್ನು ಎತ್ತಿ ಹಿಡಿಯುವ ದೃಷ್ಟಿಯಿಂದ ವಿಷಯವನ್ನು ಸಭೆಯ ಗಮನಕ್ಕೆ ತರುವುದಕ್ಕೆ ಮೊದಲು ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ತರಬೇಕು. ಹೀಗೆ ಮಾಡುವುದರಿಂದ ಸಂಬಂಧಪಟ್ಟ ಮಂತ್ರಿಗಳು ಆ ಬಗ್ಗೆ ಪರೀಶೀಲಿಸಿ ಸಾಧ್ಯವಾದರೆ, ಅದಕ್ಕೆ ಉತ್ತರವನ್ನು ತಯಾರಿಸಿಕೊಂಡು ಬರಲು ಅವಕಾಶವನ್ನು ಕಲ್ಪಿಸಿದಂತಾಗುತ್ತದೆ——''

ವ್ಯಕ್ತಿಯೊಬ್ಬನ ಘನತೆ ಗೌರವಗಳಿಗೆ ಕಳಂಕ ತರುವಂತಹ ಆರೋಪಗಳನ್ನು ಮಾಡುವ ಮುನ್ನ ಆ ಸದಸ್ಯರು ಎರಡು ಷರತ್ತುಗಳನ್ನು ಪೂರೈಸಬೇಕೆಂಬುದು ಮೇಲ್ಕಂಡ ವಿವರಣೆಯಿಂದ ವ್ಯಕ್ತಪಡುತ್ತದೆ.

ಮೊದಲನೆಯದಾಗಿ, ವಿಷಯವು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ್ದು ಸೂಕ್ಷ್ಮ ಪರಿಶೀಲನೆಯಂತರ ಸದಸ್ಯರು ಅದನ್ನು ಸಭೆಯ ಗಮನಕ್ಕೆ ತರಬೇಕು ;

ಎರಡನೆಯದಾಗಿ, ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಸದಸ್ಯರು ಪೂರ್ವಭಾವಿ ಸೂಚನೆಯನ್ನು ನೀಡರಬೇಕು.

ಸಾಮಾನ್ಯವಾಗಿ ಸದಸ್ಯರು ವಿರುದ್ಧ, ಮಂತ್ರಿಗಳ ವಿರುದ್ಧ; ಅಧಿಕಾರಿಗಳ ವಿರುದ್ಧ, ಹಾಗೂ ಸಾರ್ವಜನಿಕರ ವಿರುದ್ಧ ಆರೋಪಗಳನ್ನು ಮಾಡಲಾಗುತ್ತದೆ.

ಸದಸ್ಯರೊಬ್ಬರು ಮತ್ತೊರ್ವ ಸದಸ್ಯರ ವಿರುದ್ಧ ವೈಯಕ್ತಿಕ ಆರೋಪಣೆಯನ್ನು ಮಾಡದಂತೆ 288 (ii) ನೇ ನಿಯಮದಲ್ಲಿ ಅವಕಾಶವಿದ್ದಾಗ್ಯೂ ಚರ್ಚೆಯ ನಡುವೆ ಇತರ ಸದಸ್ಯರ ವಿರುದ್ಧ ಹಲವು ಬಾರಿ ವೈಯಕ್ತಿಕ ಆರೋಪ ಮಾಡುವುದನ್ನು ನಾವು ಕಾಣುತ್ತೇವೆ. ಇಂತಹ ಸಂದರ್ಭದಲ್ಲಿ ಸಂಬಂಧಪಟ್ಟ ಸದಸ್ಯರಿಗೆ ತಕ್ಷಣ ಅಥವಾ ಸಂದರ್ಭವೊದಗಿದಾಗ ಅವರ ವಿರುದ್ಧ ಮಾಡಲಾದ ಆರೋಪಗಳ ಬಗ್ಗೆ ಉತ್ತರ ನೀಡುವ ಅವಕಾಶವಿರುತ್ತದೆ. ಅಲ್ಲದೆ, ಸದರಿ ವಿಷಯವು ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸದಿದ್ದಲ್ಲಿ ಅವರು ಮಾಡಿರುವ ಆರೋಪಗಳನ್ನು ಪಾಪಸು ಪಡೆಯುವಂತೆ ಅಧ್ಯಕ್ಷರು ಆರೋಪ ಮಾಡಿರುವ ಸದಸ್ಯರಿಗೆ ತಿಳಿಸಬಹುದು. ಆರೋಪಗಳು ಅವಮಾನಕರವಾಗಿದ್ದಲ್ಲಿ ಅಧ್ಯಕ್ಷರು ಅವುಗಳನ್ನು ಕಲಾಪದ ವರದಿಯಿಂದ ತೆಗೆದುಹಾಕಬಹುದು. ಈ ಸಂದರ್ಭದಲ್ಲಿಯೂ ಆರೋಪಗಳನ್ನು ಮಾಡುವುದಕ್ಕೆ ಮೊದಲು ಪೂರ್ವಭಾವಿ ಸೂಚನೆಯನ್ನು ಕೊಡುವುದು ಸೂಕ್ತವಾಗಿದೆ.

ಮಂತ್ರಿಯೋರ್ವರ ಅಧೀನದಲ್ಲಿರುವ ಇಲಾಖೆಯ ಬಗ್ಗೆ ಸದಸ್ಯರು ಅವರನ್ನೂ ಟೀಕಿಸಬಹುದು ಮತ್ತು ಇಲಾಖೆಯ ಆಗುಹೋಗುಗಳ ಬಗ್ಗೆಯೂ ಕಟುವಾಗಿ ಟೀಕಿಸಬಹುದು. ಇಂತಹ ಸಂದರ್ಭದಲ್ಲಿ ಪೂರ್ವಭಾವಿ ಸೂಚನೆಯ ಅವಶ್ಯಕತೆ ಇರುವುದಿಲ್ಲ. ಆದರೆ, ಮಂತ್ರಿಗಳಿಗೆ ಸಂಬಂಧಿಸಿದ ಇಲಾಖೆಯ ಆಗು ಹೋಗುಗಳಿಗೆ ಪೂರ್ಣವಾಗಿ ಸಂಬಂಧಿಸಿದಂತಿದ್ದು ಅವರ ಮೇಲೆ ಆರೋಪ ಮಾಡಬೇಕಾದಲ್ಲಿ, ಆ ಬಗ್ಗೆ ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡುವುದು ಸೂಕ್ತವಾಗಿದೆ.

ಅಧಿಕಾರಿಗಳನ್ನು ಹೆಸರಿಸುವ ಮೂಲಕ ಅನೇಕ ಬಾರಿ ಆರೋಪಗಳನ್ನು ಮಾಡಲಾಗುತ್ತದೆ ಆ ರೀತಿ ಅಧಿಕಾರಿಗಳ ಹೆಸರುಗಳನ್ನು ಸೂಚಿಸದೆ ಅವರ ಹುದ್ದೆಯನ್ನು ಸೂಚಿಸಿ ಆರೋಪ ಮಾಡಬಹುದು. ಆದರೆ ಇಲಾಖೆಯ ಎಲ್ಲ ಆಗುಹೋಗುಗಳ ಬಗ್ಗೆ ಸಂಬಂಧಪಟ್ಟ ಮಂತ್ರಿಗಳೇ ವಿಧಾನ ಮಂಡಲಕ್ಕೆ ಜವಾಬ್ದಾರರೆಂಬುದು ಸಾಂಸದಿಕ ಸಿದ್ಧಾಂತವಾಗಿದೆ.

ಇದೇ ಸಿದ್ಧಾಂತವನ್ನು ಯುನೈಟೆಡ್‌ಕಿಂಗ್‌ಡಮ್‌ನಲ್ಲಿ ಅಟ್ಲಿ ಅವರ ಮಂತ್ರಿ ಮಂಡಲದಲ್ಲಿ ಉಪ ಪ್ರಧಾನರಾಗಿದ್ದ ಹರ್ಬಟ್ ಮಾರಿಸನ್ ಅವರು ತಮ್ಮ ''ಸಂಸತ್ತು ಹಾಗೂ ಸರ್ಕಾರ'' (Parliament and Government) ಎಂಬ ಪುಸ್ತಕದಲ್ಲಿ ಕೆಳಕಂಡಂತೆ ತಿಳಿಸಿದ್ದಾರೆ.

'' ತಮ್ಮ ಅಧೀನದಲ್ಲಿರುವ ಅಧಿಕಾರಿಗಳು ಕಾಲಕಾಲಕ್ಕೆ ಕೈಕೊಂಡ ಕಾರ್ಯಗಳಿಗೆ ಸಂಬಂಧಿಸಿದ ಹೊಣೆಯನ್ನು ತಾವೇ ಹೊರುವುದು ಸಂಬಂಧಪಟ್ಟ ಮಂತ್ರಿಗಳಿಗೆ ಕಷ್ಟಕರವಾದ ಕೆಲಸ. ಅದರೆ, ಅದೇ ಸರಿಯಾದ ಹೆಜ್ಜೆ. ಸಂಸತ್ತಿಗೆ ಹಾಗೂ ಜನತೆಗೆ ಯಾರಾದರೊಬ್ಬರು ಜವಾಬ್ದಾರರಾಗಿರಲೇ ಬೇಕು. ಸಂಸತ್ತಾಗಲಿ ಅಥವಾ ಜನತೆಯಾಗಲಿ ಈ ಜವಾಬ್ದಾರಿಯನ್ನು ಹೋರುವುದಕ್ಕಾಗುದಿಲ್ಲ. ಏಕೆಂದರೆ, ಅಧಿಕಾರಿಗಳ ಮೇಲಿನ ಹತೋಟಿ ಮಂತ್ರಿಗಳಿಗಿರುತ್ತದೆ. ಕಾರ್ಯಾಂಗವು ಕೈಕೊಳ್ಳುವ ಪ್ರತಿಯೊಂದು ಕಾರ್ಯಕ್ಕೆ ಸಂಬಂದಿಸಿದಂತೆಯೂ ಕೆಲವು ಮಂತ್ರಿಗಳನ್ನು ಸಂಸತ್ತಿಗೆ ಹಾಗೂ ಅದರ ಮೂಲಕ ಜನತೆಗೆ ಜವಾಬ್ದಾರರನ್ನಾಗಿ ಮಾಡಿರುವುದು ನಮ್ಮ ಸಂಸದೀಯ ಪದ್ಧತಿಯ ಸರ್ಕಾರದ ಮೂಲಭೂತ ಅಂಶವಾಗಿದ್ದು ಈ ಪದ್ಧತಿಯು ಅಧಾರ ಸ್ಥಂಭವಾಗಿದೆ. ಘಟನೆಗೆ ಕಾರಣರಾದ ಅಧಿಕಾರಿಯ ಹೆಸರನ್ನು ಸೂಚಿಸುವಂತೆ ಆಗಿಂದಾಗ್ಗೆ ಸಭೆಯಲ್ಲಿ ಒತ್ತಾಯ ಮಾಡಲಾಗುತ್ತದೆ. ಘಟನೆಗೆ ಯಾರನ್ನಾದರೂ ಜವಾಬ್ದಾರರನ್ನಾಗಿ ಮಾಡಬೇಕಾದಲ್ಲಿ ಇಲಾಖೆಯ ಜವಾಬ್ದಾರಿ ಹೊತ್ತಿರುವ ಮಂತ್ರಿಗಳನ್ನೇ ಏನಾ ಬೇರೆಯೊಬ್ಬರನ್ನಲ್ಲ ಎಂಬುದು ಸಂಬಂಧಪಟ್ಟ ಮಂತ್ರಿಗಳ ಉತ್ತರ. ಇದನ್ನು ಮಾರಿಸನ್ ಅವರ ಮಾತಿನಲ್ಲೇ

ಹೇಳಿದಲ್ಲಿ ಅದು ಹೀಗಿದೆ : The proper answer of the Minister is that if the House wants any body's head, it must be his head as the responsible Minister. ಅಲ್ಲದೆ, ಸಂಬಂಧಪಟ್ಟ ಇಲಾಖಾಧಿಕಾರಿಗಳ ಬಗ್ಗೆ ಕ್ರಮ ಕೈಕೊಳ್ಳುವುದನ್ನೂ ಅವರಿಗೇ ಬಿಡಬೇಕು.''

ಇದನ್ನು ನಾನು ಇಲ್ಲಿ ಉದಹರಿಸಿದ ಉದ್ದೇಶ ಈ ಸದನದಲ್ಲಿಯೂ ಅನೇಕ ಬಾರಿ ಅಧಿಕಾರಿಗಳ ಹೆಸರುಗಳನ್ನು ಬಳಸಲಾಗುತ್ತಿದೆ. ಟೀಕೆಗೆ ಉತ್ತರಿಸಲು ಸಭೆಯಲ್ಲಿ ಹಜರಿರದ ಹಾಗೂ ಉತ್ತರಿಸಲಾರದ ಅಧಿಕಾರಿಗಳನ್ನು ಅಥವಾ ಇತರ ವ್ಯಕ್ತಿಗಳನ್ನು ಟೀಕೆನದಂತೆ ನಮ್ಮ ಸಂಸತ್ತಿನಲ್ಲಿಯೂ, ಇತರ ರಾಜ್ಯ ವಿಧಾನ ಮಂಡಲಗಳಲ್ಲಿಯೂ ನೀಡಿರುವ ಅನೇಕ ತೀರ್ಪುಗಳಿವೆ.

(ಶ್ರೀ ಮಾವಲಂಕರ್ ಅವರು) 8-4-1954 ರಂದು ಲೋಕ ಸಭೆಯ ಅಧ್ಯಕ್ಷರು ಕೆಳಕಂಡಂತೆ ತೀರ್ಪು ನೀಡಿದ್ದಾರೆ : ''ಸಭೆಯಲ್ಲಿ ಹಾಜರಿರದ ಹಾಗೂ ಸಭೆಗೆ ವಿವರಣೆ ನೀಡುವ ಅಥವಾ ಆರೋಪಕ್ಕೆ ಉತ್ತರಿಸುವ ಅವಕಾಶದೊರೆಯದ ವ್ಯಕ್ತಿಗಳ ಹೆಸರುಗಳನ್ನು ಯಾವ ಸದಸ್ಯರೂ ಸಭೆಯಲ್ಲಿ ಉಚ್ಚರಿಸುವುದು ತಪ್ಪು ಹಾಗೂ ಸಾಧುವಲ್ಲವೆಂದು ನಾನು ಅನೇಕ ಬಾರಿ ತಿಳಿಸಿದ್ದೇನೆ. ನ್ಯೂನತೆಗಳೇನಾದರೂ ಕಂಡು ಬಂದಲ್ಲಿ ಅಥವಾ ಆ ರೀತಿ ಇರುವುದಾಗಿ ಮಾತನಾಡಿದ ಸದಸ್ಯರಿಗೆ ತಿಳಿದು ಬಂದಿಲ್ಲಿ ಹೆಸರುಗಳನ್ನುಚ್ಚರಿಸದೆ ವಿಷಯಕ್ಕೆ ಸಂಬಂಧಿಸಿದ ಮಂತ್ರಿಗಳನ್ನು ಟೀಕಿಸಬಹುದು. ಈ ಸಭೆಗೆ ಮಂತ್ರಿಗಳು ಜವಾಬ್ದಾರರೇ ಹೊರತು ಅವರ ಅಧೀನದಲ್ಲಿ ಕೆಲಸ ಮಾಡುವ ಅಧಿಕಾರಿಗಳಿಲ್ಲ. ಅವರು ಹೆಸರುಗಳನ್ನು ಈ ಸಭೆಯ ಚರ್ಚೆಯಲ್ಲಿ ಬಳಸಬಾರದು.——

ಈ ಬಗ್ಗೆ ನಿಯಮವು ಇದೆ. ಅದರೆ ಸದಸ್ಯರ ನಿಯಮಗಳನ್ನು ಮೀರಿತಂತಿದೆ. ಕೆಲವು ಬಾರಿ ಚರ್ಚೆಯ ಬರದಲ್ಲಿ ಆರೋಪಗಳನ್ನು ಮಾಡಲಾಗುತ್ತದೆ. ಯಾವುದೇ ವ್ಯಕ್ತಿಯ ಹೆಸರನ್ನು ಚ್ಚರಿಸದಂತೆ ನಾನು ಮತ್ತೊಮ್ಮೆ ಸದಸ್ಯರನ್ನು ಕೋರುತ್ತೇನೆ. ಇದನ್ನೇನಾದರೂ ಅತಿಕ್ರಮಿಸಿದಲ್ಲಿ ನಾನು ಇಲ್ಲಿ ಕುಳಿತಿರುವವರೆಗೂ ಅಂತಹ ಸದಸ್ಯರು ಮಾತನಾಡುವ ಅವಕಾಶ ಪಡೆಯಲಾರರು ಆದರೆ, ಇದನ್ನು ನೋಚನೆಯೆಂಬುದಾಗಿ ಭಾವಿಸಬೇಕಲ್ಲದೆ ಹೆದರಿನುತ್ತಿದ್ದೇನೆಂದು ಭಾವಿಸಬಾರದು.''

ಈ ಸಭೆಯ ಹಿಂದಿನ ಅಧ್ಯಕ್ಷರುಗಳು ಈ ಬಗ್ಗೆ ಚರ್ಚಿಸಿ ತೀರ್ಪುಗಳನ್ನು ನೀಡಿದ್ದಾರೆ ಕಾಮನ್ಸ್ ಸಭೆಯ, ಭಾರತೀಯ ಸಂಸತ್ತಿನ ಹಾಗೂ ಇತರ ವಿಧಾನ ಮಂಡಲಗಳ ತೀರ್ಪುಗಳನ್ನು ಪರಿಶೀಲಿಸಿ ಹಿಂದಿನ ಅಧ್ಯಕ್ಷರೊಬ್ಬರು (ಶ್ರೀ ಎಸ್ ಆರ್. ಕಂಡಿ ಅವರು) 30-4-1958 ರಂದು ಕೆಳಕಂಡ ತೀರ್ಪನ್ನು ನೀಡಿದ್ದಾರೆ :

''ಈ ಸದನದ ಮಾನ್ಯ ಸದಸ್ಯರೆಲ್ಲರೂ ಅಧಿಕಾರಿಗಳನ್ನು ರಾಜಕೀಯ ರಂಗದಿಂದ ಹೊರಗಿಡುವಲ್ಲಿ ಸಹಕರಿಸಬೇಕು. ತಮ್ಮ ಅಧಿಕಾರಿಗಳು ಕೈಕೊಂಡ ಕಾರ್ಯಗಳ ಬಗ್ಗೆ ಸಂವಿಧಾನಾತ್ಮಕ ಹೊಣೆಯನ್ನು ಪೂರ್ಣವಾಗಿ ಹೊರಲು ಸದನದಲ್ಲಿ ಮಂತ್ರಿಗಳಿರುವುದರಿಂದ, ಸಾಧ್ಯವಾದಷ್ಟು ಮಟ್ಟಿಗೆ, ಅಧಿಕಾರಿಗಳ ಸಾರ್ವಜನಿಕ ಟೀಕೆಗೆ ಗುರಿಯಾಗದಂತೆ ನೋಡಿಕೊಳ್ಳಬೇಕು. ಅವರ ಸಿಬ್ಬಂದಿ ವರ್ಗದವರ ಬಗ್ಗೆ ಕ್ರಮ ಕೈಕೊಳ್ಳುವ ಪೂರ್ಣಾಧಿಕಾರ ಮಂತ್ರಿಗಳಿಗಿರುವುದರಿಂದ ಅಧಿಕಾರಿಗಳ ದುರ್ನಡತೆ ಅಥವಾ ಕರ್ತವ್ಯ ಲೋಪಗಳ ಬಗ್ಗೆ ಕ್ರಮ ಕೈಕೊಳ್ಳುವುದನ್ನು ಅವರಿಗೇ ಬಿಡಕೇಕು. ನೀತಿ ಬಾಹಿರರಾದಲ್ಲಿ ಅಷ್ಟರ ಮಟ್ಟಿಗೆ ಅಡಳಿತವೂ ಕೆಡುತ್ತದೆ''

ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡಿದಲ್ಲಿ ಅವರು ಸದರಿ ವಿಷಯದ ಬಗ್ಗೆ ವಿಚಾರಣೆ ನಡೆಸಲು ಅನುಕೂಲವಾಗುವುದೆಂದೂ ಅವರು ಸಲಹೆ ಮಾಡಿದ್ದಾರೆ.

ಅಧಿಕಾರಿಯೊಬ್ಬನು ನನ್ನ ಅಧಿಕಾರ ನಿರ್ವಹಣೆಯಲ್ಲಿ ದುರ್ನಡತೆಯಿಂದ ವರ್ತಿಸಿದ ಬಗ್ಗೆ ಸದಸ್ಯರಿಗೆ ವೈಯಕ್ತಿಕ ಅನುಭವವಿದ್ದಲಿ ಅಥವಾ ನಂಬಲರ್ಹವಾದ ಪುರವೆ ಸಾಕಷ್ಟಿದ್ದಲ್ಲಿ ಆ ಬಗ್ಗೆ ಅಧಿಕಾರಿಗಳ ವಿರುದ್ಧ ಆರೋಪ ಮಾಡಲು ಅಡ್ಡಿ ಇರುವುದಿಲ್ಲ. ಅದರೆ, ವಿಷಯವನ್ನು ಸಭೆಯ ಗಮನಕ್ಕೆ ತರುವ ಮುನ್ನ ಸಂಬಂಧಪಟ್ಟ ಮಂತ್ರಿಗಳಿಗೆ ಆ ಬಗ್ಗೆ ಸೂಚನೆ ನೀಡಬೇಕು. ಹಾಗೆ ಮಾಡುವುದರಿಂದ, ಮಂತ್ರಿಗಳು ಅದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಸಂಗ್ರಹಿಸಿ ವಿಷಯವನ್ನು ಸದಸ್ಯರು ಸಭೆಯ ಗಮನಕ್ಕೆ ತಂದಾಗ ಉತ್ತರ ನೀಡಲು ಅವರಿಗೆ ಅನುಕೂಲವಾಗುತ್ತದೆ.

ನಾಗರಿಕರ ಬಗ್ಗೆ ಆರೋಪ ಮಾಡುವ ಸಂದರ್ಭದಲ್ಲಿ ಸದಸ್ಯರು ಬಹು ಜಾಗರೂಕರಾಗಿರ ಬೇಕು. ಏಕೆಂದರೆ, ಅವರಿಗೂ ಸದನಕ್ಕೂ ಸಂಬಂಧವಿರುವುದಿಲ್ಲ. ಅಲ್ಲದೆ, ನಾಗರಿಕರ ಚಟುವಟಿಕೆಗಳ ಬಗ್ಗೆ ಮಂತ್ರಿಗಳಿಗೆ ನೇರ ಜವಾಬ್ದಾರಿ ಇರುವುದಿಲ್ಲ ಯಾವುದಾದರೊಂದು ರೀತಿಯಲ್ಲಿ ಸರ್ಕಾರ ದೊಡನೆ ವ್ಯವಹಾರವಿಟ್ಟುಕೊಂಡಿರುವ ಕಂಟ್ರಾಕ್ಟರುಗಳಂತಹ ಅಥವಾ ಸರ್ಕಾರದ ಪರವಾಗಿ ಏಜೆನ್ಸಿಗಳನ್ನು ನಡೆಸುತ್ತಿರುವಂತಹವುರವಿರುದ್ಧ ಸದಸ್ಯರೊಬ್ಬರು ಆರೋಪಮಾಡಬೇಕಾದಲ್ಲಿ ಮಂತ್ರಿಗಳಿಗೆ ಹಾಗೂ ಅಧ್ಯಕ್ಷರಿಗೆ ಆ ಬಗ್ಗೆ ಪೂರ್ವಭಾವಿ ಸೂಚನೆ ನೀಡಲೇಬೇಕು.

ವಿವಿಧ ಸಂಭ್ರಗಳ ಬಗ್ಗೆ ವಿಚಾರ ಮಾಡಿದ ನಂತರ ಲೋಕನಭಾಧ್ಯಕ್ಷರು ವಿವಿಧ ವರ್ಗದವರು ತಮ್ಮನ್ನು ಸಮರ್ಥಿಸಿ ಕೊಳ್ಳಲನುಕೂಲವಾಗುವಂತೆ ಕೆಳಕಂಡ ಕಾರ್ಯವಿಧಾನವನ್ನು ರೂಪಿಸಿ ಮಾಡಿದ್ದಾರೆ :

"1. ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಸೂಚನೆ ನೀಡಿ, ಅಧ್ಯಕ್ಷರ ಪೂರ್ವಭಾವಿ ಅನುಮತಿಯನ್ನು ಪಡೆಯದ ಹೊರತು ಹೊರಗಿನವರ ವಿರುದ್ಧ ಆರೋಪ ಮಾಡಲು ಯಾವ ಸದಸ್ಯರಿಗೂ ಅವಕಾಶವಿರುವುದಿಲ್ಲ. ಆ ಸೂಚನೆಯಲ್ಲಿ ಆರೋಪಿಯ ಹೆಸರು ಹಾಗೂ ಆರೋಪಗಳನ್ನು ಸೂಚಿಸಿರಬೇಕು ಮತ್ತು ಮೇಲ್ನೋಟಕ್ಕೆ ವಾದದಲ್ಲಿ ಹುರುಳಿದೆ ಎಂಬ ಬಗ್ಗೆ ಸ್ವಲ್ಪ ಮಟ್ಟಿನ ಪುರಾವೆ ಇರಬೇಕು ;

2. ಅಧ್ಯಕರ ಪೂರ್ವಭಾವಿ ಅನುಮತಿಯನ್ನು ಪಡೆಯದೆ ಸದಸ್ಯರು ಹೊರಗಿನವರೊಬ್ಬರ ವಿರುದ್ಧ ಅಪಾದನೆ ಮಾಡಿದಲ್ಲಿ ಅದು ಸದನದ ಕಲಾಪಗಳ ವರದಿಯಲ್ಲಿ ಸೇರುವುದಿಲ್ಲ ;

3. ಅಧಿಕಾರಿಗಳ ವಿರುದ್ಧ ಅಪಾದನೆ ಮಾಡಿದ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿ ಗಳು ಇಷ್ಟಪಟ್ಟದಲ್ಲಿ ಅವರು ಸದನದಲ್ಲಿ ಹೇಳಿಕೆ ನೀಡಬಹುದು ;

4. ಹೊರಗಿನವರೊಬ್ಬರು ಖುದ್ದುವಾತ್ತು ಮಾಡತಕ್ಕ ದಾಖಲೆಗಳೊಡನೆ ಅಧ್ಯಕ್ಷರಿಗೆ ಮನವಿಯನ್ನು ಮಾಡಿಕೊಂಡಲ್ಲಿ, ಅಧ್ಯಕ್ಷರು ಅವರ ವಿವೇಚನೆಯಿಂದ ಅದನ್ನು ಸರಕಾರಕ್ಕೆ ಅಥವಾ ಮನವಿಗಳ ಸಮಿತಿಗೆ ಕಳುಹಿಸಿ ಆ ಬಗ್ಗೆ ವಿಚಾರಣೆ ನಡೆಸಿ ವರದಿ ಮಾಡುವಂತೆ ತಿಳಿಸಬಹುದು."

ಮೇಲ್ಕಂಡ ಪೂರ್ವ ನಿದರ್ಶನಗಳನ್ನು ಗಮನಿಸಿವಲ್ಲಿ ಉನ್ನತ ಮಟ್ಟದ ಸಂಸದೀಯ ಶಿಷ್ಟಾಚಾರವನ್ನು ಉಳಿಸಿಕೊಳ್ಳಲು ಹಾಗೂ ಜನತೆಯ ಗೌರವವನ್ನು ರಕ್ಷಿಸಲು ಸದಸ್ಯರು ಕೆಳಕಂಡ ವಿಧಾನವನ್ನು ಅನುಸರಿಸಬೇಕೆಂಬುದು ನನ್ನ ಅಭಿಪ್ರಾಯ ಹಾಗೂ ತೀರ್ಪು.

1. ಇರಾಖೆಯ ಅಥವಾ ಹೋಗುಗಳ ಬಗ್ಗೆ ಸಂಬಂಧಪಟ್ಟ ಇರಾಖೆಯ ಮಂತ್ರಿಗಳನ್ನು ಟೀಕಿಸುವಾಗ ಪೂರ್ವಭಾವಿ ಸೂಚನೆಯ ಅವಶ್ಯಕತೆ ಇರುವುದಿಲ್ಲ ;

2. ಮಂತ್ರಿಗಳಿಗೆ ಸಂಬಂದಿಸಿದ ಇರಾಖೆಯ ಅಥವಾ ಹೋಗುಗಳಿಗೆ ಪೂರ್ಣವಾಗಿ ಸಂಬಂದಿಸದಂತಿದ್ದು, ಅವರ ಮೇಲೆ ಆರೋಪ ಮಾಡಬೇಕಾದಲ್ಲಿ, ಅಧ್ಯಕ್ಷರಿಗೆ ಹಾಗೂ ಸಂಬಂಧ ಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡುವುದು ಸೂಕ್ತ.

3. ಅಧಿಕಾರಿಗಳ ದುರ್ನಡತೆಯ ಬಗ್ಗೆ ಆರೋಪ ಮಾಡಬೇಕಾದಲ್ಲಿ ಸಂಬಂಧಪಟ್ಟ ಮಂತ್ರಿಗಳಿಗೆ ಸೂಚನೆ ನೀಡಲೇ ಬೇಕು ;

4. ಸದಸ್ಯರಲ್ಲದ ಹೊರಗಿನವರ ವಿರುದ್ಧ ಆರೋಪ ಮಾಡಬೇಕಾದ ಸಂದರ್ಭದಲ್ಲಿ ಅಧ್ಯಕ್ಷರಿಗೆ ಹಾಗೂ ಸಂಬಂಧಪಟ್ಟ ಮಂತ್ರಿಗಳಿಗೆ ಪೂರ್ವಭಾವಿ ಸೂಚನೆಯನ್ನು ನೀಡಲೇ ಬೇಕು.

2.00 P.M.

Calling Attention to a matter of urgent Public Importance :

re: Shifting of Timber Yard in Bangalore City

Sri T.R. Shamanna (Fort) : Sir, I beg to call the attention of the Minister for law and Municipal Administration to the Shifting of timber and in Bangalore city to the new Timber yard lay out on the Mysore Road.